ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು

ಕೃಷಿ ಹವಾಮಾನ ವಿಭಾಗ, ಜಿ.ಕೆ.ವಿ.ಕೆ, ಬೆಂಗಳೂರು–65

ರಾಗುಟ್ಟಹಳ್ಳಿಯ ಕೃಷಿ ಹವಾಮಾನ ಮುನ್ಸೂಚನೆ

ದಿನಾಂಕ:18.04.16

ಈ ವಾರದ ಮುನ್ಸೂಚನೆ (19.4.16 to 23.4.16 ವರೆಗೆ)

ನಿಯತಾಂಕಗಳು	19.04.16	20.04.16	21.04.16	22.04.16	23.04.16
ಮಳೆ (ಮಿ ಮಿ)	0	0	0	0	0
ಗರಿಷ್ಠ ಉಷ್ಣಾಂಶ(ಡಿ.ಸೆ.)	37	36	38	39	37
ಕನಿಷ್ಠ ಉಷ್ಣಾಂಶ (ಡಿ.ಸೆ.)	21	22	23	24	25
ಮೋಡ (ಪ್ರಮಾಣ)	1	1	1	4	4
ಅರ್ದ್ರತೆ ೭.೨೦ ಬೆ (ಶೇ)	100	99	71	76	70
ಅರ್ದ್ರತೆ ೨.೨೦ ಮ (ಶೇ)	15	19	12	19	24
ಗಾಳಿಯ ವೇಗ (ಕಿ.ಮಿ/ಗಂಟೆಗೆ)	18	17	13	10	15
ಗಾಳಿಯ ದಿಕ್ಕು (ಡಿಗ್ರಿ)	189	213	188	257	278

ಭಾರತೀಯ ಹವಾಮಾನ ಇಲಾಖೆಯ ಮುನ್ಸೂಚನೆಯ ಪ್ರಕಾರ ರಾಗುಟ್ಟಹಳ್ಳಿ ಹಾಗೂ ಸುತ್ತಮುತ್ತ ಮುಂದಿನ ಐದು ದಿನಗಳು ಒಣ ಹವೆ ಮುಂದುವರೆಯಲಿದೆ. ದಿನದ ಗರಿಷ್ಠ ಉಷ್ಣಾಂಶವು 36-39^{o}C ಮತ್ತು ಕನಿಷ್ಠ 21-25^{o}C ಇರಲಿದೆ. ಬೆಳಗಿನ ಆರ್ದ್ರತೆ ಪ್ರಮಾಣ ಶೇ 71-100 % ಇದ್ದು, ಮಧ್ಯಾಹ್ನ 12-24 % ಇರುವುದು ಮತ್ತು ಗಾಳಿಯು ಗಂಟೆಗೆ ಸರಾಸರಿ 10-18 ಕಿ.ಮೀ. ವೇಗದಲ್ಲಿ ಬೀಸುವ ಸಂಭವವಿದೆ.

ಕೃಷಿ ಕಾರ್ಯಕ್ರಮಗಳ ಬಗ್ಗೆ ಅನುಸರಿಸಬೇಕಾದ ವಿವರ

- ✓ ಬರುವ ದಿನಗಳಲ್ಲಿ ಬಿಸಿಲಿನ ತಾಪ ಹೆಚ್ಚಾಗುವುದು, ತರಕಾರಿ ಹಾಗೂ ಇತರೆ ಬೆಳೆಗಳಿಗೆ ಸರಿಯಾದ ಪ್ರಮಾಣದಲ್ಲಿ ನೀರು ಒದಗಿಸಬೇಕು.
- ✓ **ಪೂರ್ವ ಮುಂಗಾರಿಗೆ ಈ ಕೆಳಗಿನ ತಳಿಗಳನ್ನು ಬಿತ್ತನೆ ಮಾಡಲು ಸೂಚಿಸಲಾಗಿದೆ.**

  ರಾಗಿ: ಇಂಡಾಫ್–೯, ಎಳ್ಳು : ನವಿಲೆ–೧, ಟಿ–೭, ಅಲಸಂದೆ : ಟಿ.ವಿ.ಎಕ್ಸ್–೯ಳಳ, ಕೆ.ಬಿ.ಸಿ–೧

  ಹೆಸರು :ಪಿ.ಎಸ್–೧೬, ಪಿ.ಡಿ.ಎಮ್–೪೪, ೧೭೪ , ಉದ್ದು: ಕರಗಾವ್–೩, ಟಿ–೯, ರಶ್ಮಿ
- ✓ ಕೋಳಿ ಸಾಕಣೆ, ಜಾನುವಾರು, ರೇಷ್ಮೆ ಕೃಷಿ ಬಿಸಿಲಿನ ತಾಪದಿಂದ ರಕ್ಷಿಸಲು ಸೂಕ್ತ ವ್ಯವಸ್ಥೆ ಕೊಡಬೇಕು.
- ✓ ಜಾನುವಾರು: ಬಿಸಿಲು ಹೆಚ್ಚಾಗಿರುವುದರಿಂದ ಹಸಿರು ಹುಲ್ಲಿನ ಅಭಾವ ಕಂದುಬರುತ್ತದೆ ಆದುದರಿಂದ ಹಗೇವಿನಲ್ಲಿ ರಸಮೇವನ್ನು ತಯಾರಿಸಿ ದನಕರುಗಳಿಗೆ ಕೊಡಿ.
- ✓ ನೀರು ಬರಿದಾಗಿರುವ ಕೆರೆಗಳಲ್ಲಿ ಕೆರೆಗೋಡು ಮಣ್ಣನ್ನು ತೆಗೆದು ಭೂಮಿಗೆ ಸೇರಿಸುವುದರಿಂದ ಭೂಮಿಯ ಫಲವತ್ತತೆಯನ್ನು ಹೆಚ್ಚಿಸಬಹುದು
- ✓ ಏಪ್ರಿಲ್ ಮತ್ತು ಮೇ ತಿಂಗಳುಗಳಲ್ಲಿ ಮೊದಲನೆ ಬೆಳೆಯಾಗಿ ಅಲಸಂದೆ, ಎಳ್ಳು, ಉದ್ದು, ಹೆಸರು ಮೇ ತಿಂಗಳಿನಲ್ಲಿ ಬಿತ್ತ ಬಹುದಾದ ಇವುಗಳ ಬೀಸಾಯಕ್ಕೆ ಪರಿಕರಗಳ ಪೂರಕಗಳನ್ನು ಸಿದ್ಧತೆ ಮಾಡಿಕೊಳ್ಳಿ.
- ✓ ಮಾವು: ತೇವಾಂಶದ ರಕ್ಷಣೆಗೆ ಬೆಳೆಗಳ ಉಳಿಕೆ ಮತ್ತು ಕಳೆಗಳನ್ನು ಕತ್ತರಿಸಿ ಹೊದಿಕೆ ಮಾಡುವುದು.
- ✓ ಮಾವಿನ ಮರದ ಕೆಳಗೆ ಬೆಳೆದಿರುವ ಕಳೆಗಿಡಗಳನ್ನು ಕಡಿದುಹಾಕಿ ಸ್ವಚ್ಚಗೊಳಿಸಬೇಕು.

ಸಸ್ಯ ಸಂರಕ್ಷಣೆ:

- ✓ **ರಸ ಹೀರುವ ಕೀಟಗಳು:** ಇವುಗಳ ಹತೋಟಿಗೆ ಶೇ. ೪ರಷ್ಟು ಬೇವಿನ ಕಷಾಯವನ್ನು ಸಿಂಪಡಿಸಬೇಕು ಅಥವಾ ಬೇವಿನ ಎಣ್ಣೆಯನ್ನು ಸಿಂಪಡಿಸಬೇಕು ಅಥವಾ ಇಮಿಡಕ್ಲೋಪ್ರಿಡ್ (0.5 ml/L) ಸಿಂಪಡಿಸಿ.

ನೋಡಲ್ ಅಧಿಕಾರಿ:

ಕೃಷಿ ಹವಾಮಾನ ವಿಭಾಗ

ಕೃಷಿ ವಿಶ್ವವಿದ್ಯಾನಿಲಯ, ಬೆಂಗಳೂರು